ಪ್ರಾರ್ಥನೆ

# ಶ್ರೀ ಗುರುಪಾದುಕಾ ಸ್ತೋತ್ರಂ

**ಅನಂತಸಂಸಾರ ಸಮುದ್ರತಾರ**
**ನೌಕಾಯಿತಾಭ್ಯಾಂ ಗುರುಭಕ್ತಿದಾಭ್ಯಾಮ್ ।**
**ವೈರಾಗ್ಯಸಾಮ್ರಾಜ್ಯದಪೂಜನಾಭ್ಯಾಂ**
**ನಮೋ ನಮಃ ಶ್ರೀಗುರುಪಾದುಕಾಭ್ಯಾಮ್ ॥ ೧ ॥**

ಅಪಾರ ಸಂಸಾರ ಸಾಗರವನ್ನು ದಾಟಿಸುವ ನೌಕೆಯಾದ, ಗುರುಭಕ್ತಿಯನ್ನುಂಟುಮಾಡುವ, ವೈರಾಗ್ಯವೆಂಬ ಸಾಮ್ರಾಜ್ಯವನ್ನು ಕರುಣಿಸುವ ಶ್ರೀಗುರುವಿನ ಪಾದುಕೆಗಳಿಗೆ ಪದೇ ಪದೇ ನಮಸ್ಕರಿಸುವೆ.

**ಕವಿತ್ವವಾರಾಶಿನಿಶಾಕರಾಭ್ಯಾಂ**
**ದೌರ್ಭಾಗ್ಯದಾವಾಂಬುದಮಾಲಿಕಾಭ್ಯಾಮ್ ।**
**ದೂರೀಕೃತಾನಮ್ರ ವಿಪತ್ತತಿಭ್ಯಾಂ**
**ನಮೋ ನಮಃ ಶ್ರೀಗುರುಪಾದುಕಾಭ್ಯಾಮ್ ॥ ೨ ॥**

ಕವಿತ್ವವೆಂಬ ಸಮುದ್ರಕ್ಕೆ ಚಂದ್ರನಂತಿರುವ, ದೌರ್ಭಾಗ್ಯವೆಂಬ ಕಾಡ್ಗಿಚ್ಚಿಗೆ ಮೋಡಗಳ ಮಾಲೆಯಂತಿರುವ, ಬಾಗಿ ನಮಸ್ಕರಿಸಿದವರ ವಿಪತ್ತಿನ ಪರಂಪರೆಗಳನ್ನೇ ದೂರಮಾಡುವ ಶ್ರೀಗುರುವಿನ ಪಾದುಕೆಗಳಿಗೆ ಪದೇ ಪದೇ ನಮಸ್ಕರಿಸುವೆ.

**ನತಾ ಯಯೋಃ ಶ್ರೀಪತಿತಾಂ ಸಮೀಯುಃ**
**ಕದಾಚಿದಪ್ಯಾಶು ದರಿದ್ರವರ್ಯಾಃ ।**
**ಮೂಕಾಶ್ಚ ವಾಚಸ್ಪತಿತಾಂ ಹಿ ತಾಭ್ಯಾಂ**
**ನಮೋ ನಮಃ ಶ್ರೀಗುರುಪಾದುಕಾಭ್ಯಾಮ್ ॥ ೩ ॥**

ಯಾವ ಪಾದುಕೆಗಳನ್ನು ನಮಸ್ಕರಿಸಿದರೆ ಎಂಥ ದರಿದ್ರನೂ ಲಕ್ಷ್ಮೀಪತಿಗೆ ಸಮನಾಗುವನೋ, ಮೂಕನು ಕೂಡ ಬೃಹಸ್ಪತಿಗೆ ಸಮನಾಗುವನೋ, ಅಂಥ ಶ್ರೀಗುರುವಿನ ಪಾದುಕೆಗಳಿಗೆ ಪದೇ ಪದೇ ನಮಸ್ಕರಿಸುವೆ.

**ನಾಲೀಕನೀಕಾಶ ಪದಾಹೃತಾಭ್ಯಾಂ**
**ನಾನಾವಿಮೋಹಾದಿ ನಿವಾರಿಕಾಭ್ಯಾಮ್।**
**ನಮಜ್ಜನಾಭೀಷ್ಟತತಿಪ್ರದಾಭ್ಯಾಂ**
**ನಮೋ ನಮಃ ಶ್ರೀಗುರುಪಾದುಕಾಭ್ಯಾಮ್ ॥ ೪ ॥**

ಕಮಲದಂತಿರುವ ಈ ಪಾದುಕೆಗಳು ಜೀವಿಗಳ ವಿವಿಧ ಮೋಹ, ಭ್ರಮೆ ಇತ್ಯಾದಿಗಳನ್ನು ನಿವಾರಿಸುತ್ತವೆ. ಅವು ನಮಸ್ಕರಿಸಿದ ಎಲ್ಲರಿಗೂ ಬೇಡಿದ ಎಲ್ಲವನ್ನೂ ನೀಡುತ್ತವೆ. ಅಂಥ ಶ್ರೀಗುರುವಿನ ಪಾದುಕೆಗಳಿಗೆ ಪದೇ ಪದೇ ನಮಸ್ಕರಿಸುವೆ.

**ನೃಪಾಲಿ ಮೌಲಿವ್ರಜರತ್ನಕಾಂತಿ**
**ಸರಿದ್ವಿರಾಜತ್ ಝಷಕನ್ಯಕಾಭ್ಯಾಮ್ ।**
**ನೃಪತ್ವದಾಭ್ಯಾಂ ನತಲೋಕಪಂಕ್ತೇಃ**
**ನಮೋ ನಮಃ ಶ್ರೀಗುರುಪಾದುಕಾಭ್ಯಾಮ್ ॥ ೫ ॥**

ರಾಜರ ಸಮೂಹವೇ ಈ ಪಾದುಕೆಗಳಿಗೆ ನಮಸ್ಕರಿಸಿದಾಗ, ಅವರ ಕಿರೀಟದ ರತ್ನಗಳ ಕಾಂತಿಯಿಂದ ಹೊರಹೊಮ್ಮುವ ಪ್ರಭೆಯ ಅಲೆಗಳಿಂದ ಕೂಡಿದ ಸರೋವರದಲ್ಲಿ ಮೀನಿನಂತೆ ವಿರಾಜಮಾನವಾದ, ರಾಜಪದವಿಯನ್ನೂ ಕೊಡುವ ಶ್ರೀಗುರುವಿನ ಪಾದುಕೆಗಳಿಗೆ ಪದೇ ಪದೇ ನಮಸ್ಕರಿಸುವೆ.

**ಪಾಪಾಂಧಕಾರಾರ್ಕ ಪರಂಪರಾಭ್ಯಾಂ**
**ತಾಪತ್ರಯಾಹೀಂದ್ರ ಖಗೇಶ್ವರಾಭ್ಯಾಮ್ ।**
**ಜಾಡ್ಯಾಬ್ಧಿ ಸಂಶೋಷಣ ವಾಡವಾಭ್ಯಾಂ**
**ನಮೋ ನಮಃ ಶ್ರೀಗುರುಪಾದುಕಾಭ್ಯಾಮ್ ॥ ೬ ॥**

ಪಾಪವೆಂಬ ಕತ್ತಲೆಗೆ ಸೂರ್ಯನಂತಿರುವ, ತಾಪತ್ರಯವೆಂಬ ಸರ್ಪರಾಜನಿಗೆ ಪಕ್ಷಿರಾಜ ಗರುಡನಂತಿರುವ, ಜಾಡ್ಯವೆಂಬ ಸಮುದ್ರವನ್ನು ಒಣಗಿಸುವ ಬಡಬಾಗ್ನಿಯಂತಿರುವ ಶ್ರೀಗುರುವಿನ ಪಾದುಕೆಗಳಿಗೆ ಪದೇ ಪದೇ ನಮಸ್ಕರಿಸುವೆ.

**ಶಮಾದಿಷಟ್ಕ ಪ್ರದವೈಭವಾಭ್ಯಾಂ**
**ಸಮಾಧಿದಾನ ವ್ರತದೀಕ್ಷಿತಾಭ್ಯಾಮ್ ।**
**ರಮಾಧವಾಂಘ್ರಿಸ್ಥಿರಭಕ್ತಿದಾಭ್ಯಾಂ**
**ನಮೋ ನಮಃ ಶ್ರೀಗುರುಪಾದುಕಾಭ್ಯಾಮ್ ॥ ೭ ॥**

ಶಮವೇ ಮೊದಲಾದ ಆರು ಸಾಧನಗಳನ್ನು ಕರುಣಿಸುವ ವೈಭವವನ್ನು ಹೊಂದಿದ, ಭಜಿಸಿದ ಜೀವಿಗೆ ಸಮಾಧಿ ಸ್ಥಿತಿಯನ್ನು ಕರುಣಿಸುವ ದೀಕ್ಷೆಯನ್ನು ಹೊಂದಿದ, ವಿಷ್ಣುವಿನ ಪಾದಗಳಲ್ಲಿ ಸ್ಥಿರಭಕ್ತಿಯನ್ನು ಕರುಣಿಸುವ ಶ್ರೀಗುರುವಿನ ಪಾದುಕೆಗಳಿಗೆ ಪದೇ ಪದೇ ನಮಸ್ಕರಿಸುವೆ.

**ಸ್ವಾರ್ಚಾಪರಾಣಾಂ ಅಖಿಲೇಷ್ಟದಾಭ್ಯಾಂ**
**ಸ್ವಾಹಾಸಹಾಯಾಕ್ಷಧುರಂಧರಾಭ್ಯಾಮ್ ।**
**ಸ್ವಾಂತಾಚ್ಛಭಾವಪ್ರದಪೂಜನಾಭ್ಯಾಂ**
**ನಮೋ ನಮಃ ಶ್ರೀಗುರುಪಾದುಕಾಭ್ಯಾಮ್ ॥ ೮ ॥**

ಪೂಜಿಸಿದವರ ಇಷ್ಟಾರ್ಥಗಳನ್ನು ನೆರವೇರಿಸುವ, ಸ್ವಾಹಾಳ ಒಡೆಯನಾದ ಅಗ್ನಿಯನ್ನು ಕಣ್ಣಾಗಿ ಹೊಂದಿದ ಶಂಕರನ ಭಾರವನ್ನು ಹೊತ್ತಿರುವ, ಭಜಿಸಿದವರ ಅಂತಃಕರಣವನ್ನು ಶುದ್ಧಗೊಳಿಸುವ ಶ್ರೀಗುರುವಿನ ಪಾದುಕೆಗಳಿಗೆ ಪದೇ ಪದೇ ನಮಸ್ಕರಿಸುವೆ.

**ಕಾಮಾದಿಸರ್ಪ ವ್ರಜಗಾರುಡಾಭ್ಯಾಂ**
**ವಿವೇಕವೈರಾಗ್ಯ ನಿಧಿಪ್ರದಾಭ್ಯಾಮ್ ।**
**ಬೋಧಪ್ರದಾಭ್ಯಾಂ ದೃತಮೋಕ್ಷದಾಭ್ಯಾಂ**
**ನಮೋ ನಮಃ ಶ್ರೀಗುರುಪಾದುಕಾಭ್ಯಾಮ್ ॥ ೯ ॥**

ಕಾಮವೇ ಮುಂತಾದ ಸರ್ಪಗಳ ಸಮೂಹಕ್ಕೆ ಗರುಡನಂತಿರುವ, ವಿವೇಕ-ವೈರಾಗ್ಯಗಳೆಂಬ ನಿಧಿಯನ್ನು ಅನುಗ್ರಹಿಸುವ, ತನ್ನ ನಿಜಸ್ವರೂಪವನ್ನು ತಿಳಿಸಿಕೊಡುವ, ಶೀಘ್ರವಾಗಿ ಮುಕ್ತಿಯನ್ನು ಕರುಣಿಸುವ ಶ್ರೀಗುರುವಿನ ಪಾದುಕೆಗಳಿಗೆ ಪದೇ ಪದೇ ನಮಸ್ಕರಿಸುವೆ.

— ಶ್ರೀ ಶಂಕರಾಚಾರ್ಯ